# ಸ್ವಾಮಿ ಶಿವಾನಂದರ ನೆನಪುಗಳು-೨

ಸ್ವಾಮಿ ಅಶೋಕಾನಂದ

**(ಹಿಂದಿನ ಸಂಚಿಕೆಯಿಂದ ಮುಂದುವರಿದುದು)**

ಸ್ವಲ್ಪ ಕಾಲದ ನಂತರ ನಾನು ಮಠವನ್ನು ಸೇರಲು ಇಚ್ಛಿಸುವುದಾಗಿ ನನ್ನ ಮಿತ್ರನೊಬ್ಬನ ಮೂಲಕ ಸ್ವಾಮಿ ಬ್ರಹ್ಮಾನಂದರಿಗೆ ಹೇಳಿ ಕಳುಹಿಸಿದೆ. ಅದೊಂದು ವಿಚಿತ್ರವಾದ ವರ್ತನೆಯಾಗಿತ್ತು—ಹಿಂದೆ ಯಾರೂ ಇಂತಹದನ್ನು ಕೇಳಿರಲಿಲ್ಲ. ಸ್ವತಃ ನಾನೇ ಹೋಗಿ ವಿಷಯವನ್ನು ತಿಳಿಸಿ, ನನ್ನ ಕೋರಿಕೆಯನ್ನು ಅವರ ಮುಂದೆ ಸಲ್ಲಿಸಬೇಕಾಗಿತ್ತು. ಆದರೆ ಸ್ವಾಮಿ ಬ್ರಹ್ಮಾನಂದರ ಔದಾರ್ಯ ಎಷ್ಟಿತ್ತೆಂದರೆ ಅವರು ಅದನ್ನು ತಪ್ಪಾಗಿ ಎಣಿಸಲಿಲ್ಲ. ಅವರು ನನ್ನ ಮಿತ್ರನನ್ನು ನನ್ನ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು— ಆಗ ಅವರಿಗೆ ನನ್ನ ಪರಿಚಯವಿರಲಿಲ್ಲ—ಮತ್ತು ನಂತರ ಅವರು ಹೇಳಿದರು "ಆಗಲಿ, ಕೂಡಲೆ ಬೇಲೂರಿಗೆ ಬರಲು ಅವನಿಗೆ ಹೇಳು. ಇಲ್ಲಿಗಿಂತ ಉತ್ತಮ ಹವಾಗುಣವಿರುವ ಬೇರೊಂದು ಶಾಖೆಗೆ ನಾನು ಅವನನ್ನು ಕಳುಹಿಸಬಹುದು." ಆದರೆ ನಾನು ಬೇಲೂರಿಗೆ ಹೋಗಲಿಲ್ಲ. ನನ್ನ ಪೋಷಕರಿಗೆ ಸಾಲದ ಹೊರೆಯಿತ್ತು. ನಾನು ಆ ಋಣವನ್ನು ತೀರಿಸದ ಹೊರತು ಸಂಪೂರ್ಣ ತ್ಯಾಗ ಸಾಧ್ಯವಿಲ್ಲವೆಂದು ನನಗೆ ಅನ್ನಿಸಿತು. ಆದುದರಿಂದ ನಾನು ಒಂದು ಕೆಲಸಕ್ಕೆ ಸೇರಿಕೊಂಡೆ. ಏಳು ತಿಂಗಳುಗಳಲ್ಲಿ ಆ ಸಾಲವನ್ನು ತೀರಿಸಲು ಸಾಧ್ಯವಾಯಿತು. ಅದಾದ ಕೂಡಲೆ ನಾನು ಒರಿಸ್ಸದಲ್ಲಿರುವ ಭುವನೇಶ್ವರಕ್ಕೆ ಹೋದೆ. ಆಗ ಸ್ವಾಮಿ ಬ್ರಹ್ಮಾನಂದರು ಅಲ್ಲಿ ತಂಗಿದ್ದರು. ಮಠವನ್ನು ಸೇರಲು ಅವರ ಅನುಮತಿ ಕೇಳಿದೆ. ನನ್ನ ಮೊದಲ ನೇರ ಕೋರಿಕೆಯ ಬಗ್ಗೆ ನಾನಾಗಿ ಅವರಿಗೆ ನೆನಪು ಮಾಡಲಿಲ್ಲ. ಅದರ ಬಗ್ಗೆ ಕಡಿಮೆ ಹೇಳಿದಷ್ಟೂ ಒಳ್ಳೆಯದು ಎಂದು ಯೋಚಿಸಿದೆ. ಅವರಿಗೆ ಅದು ನೆನಪಾಯಿತೊ ಇಲ್ಲವೊ ತಿಳಿಯದು; ಬಹುಶಃ ಇಲ್ಲವೆಂದು ತೋರುವುದು. ಏನೇ ಆಗಲಿ, ಅವರು ಬಹಳ ಪ್ರೀತಿ, ಕರುಣೆಗಳಿಂದ ಕೂಡಲೆ ಸಮ್ಮತಿಸಿದರು. ಅದು ನಡೆದುದು ಮೇ ೧೯೨೧ರಲ್ಲಿ. ಅದೇ ಸಮಯದಲ್ಲಿ ನನಗೆ ಹಿಂದೆ ಆಗಿದ್ದ ಅನುಭವವನ್ನು ಅವರಿಗೆ ತಿಳಿಸಿದೆ ಮತ್ತು ಆ ಅನುಭವವು ಕೇವಲ ಒಂದು ಭ್ರಮೆಯಾಗಿರಬಹುದಾದ ಕಾರಣ ನಾನು ಬಹುಶಃ ಅವರಿಂದ ದೀಕ್ಷೆ ಪಡೆಯಬೇಕೆಂದು ಹೇಳಿದೆ. ಸ್ವಾಮಿ ಬ್ರಹ್ಮಾನಂದರು ಹೇಳಿದರು, "ಸ್ವಾಮಿಜಿ ನಿನಗೆ ದೀಕ್ಷೆಯನ್ನಿತ್ತಿದ್ದರೂ, ಅದೊಂದು ಭ್ರಮೆ ಎಂದು ನೀನು ಯೋಚಿಸುತ್ತಿರುವೆ. ನಾನು ನಿನಗೆ ದೀಕ್ಷೆಯನ್ನು ಕೊಟ್ಟರೆ ಅದೂ ಕೂಡ ಒಂದು ಭ್ರಮೆ ಎಂದು ನಂತರ ನೀನು ಭಾವಿಸುವುದಿಲ್ಲವೆಂಬ ಖಾತರಿ ಏನು?" ಕೆಲವು ದಿನಗಳಾದ ಮೇಲೆ ಅವರು ನನ್ನನ್ನು ಮದರಾಸಿನ ಮಠಕ್ಕೆ ಕಳುಹಿಸಿ ಬ್ರಹ್ಮಚಾರಿಗಳು ತೊಡುವ ಬಿಳಿಯ ಬಟ್ಟೆಗಳನ್ನು ಧರಿಸಲು ಹೇಳಿದರು.

ಸ್ವಾಮಿ ಬ್ರಹ್ಮಾನಂದರು ೧೯೨೧ರಲ್ಲಿ ಮದರಾಸಿಗೆ ಬಂದರು. ಆಗ ನಾನು ಅವರನ್ನು ಮತ್ತೊಮ್ಮೆ ದೀಕ್ಷೆಗಾಗಿ ಪ್ರಾರ್ಥಿಸಿದೆ: "ಆದರೆ ನೀನು ಸ್ವಾಮಿಜಿಯವರಿಂದ ಏನನ್ನೋ ಪಡೆದಿರುವೆಯೆಂದು ಹೇಳಿದೆಯಲ್ಲ", ಎಂದು ಅವರು ಹೇಳಿದರು. ಯಾವುದೋ ಕಾರಣಕ್ಕಾಗಿ ಅವರು ಅಷ್ಟು ಆಸಕ್ತಿ ತೋರಿಸುತ್ತಿಲ್ಲವೆಂದು ನಾನು ಭಾವಿಸಿದೆ. ಮದರಾಸು ಮಠದ ಅಧ್ಯಕ್ಷರಾದ ಸ್ವಾಮಿ ಶರ್ವಾನಂದರು ನನ್ನ ಪರವಾಗಿ, "ಮಹಾರಾಜ್, ದಯವಿಟ್ಟು ಅವನಿಗೆ ದೀಕ್ಷೆಯನ್ನು ಕೊಡಿ," ಎಂದು ಕೇಳಿಕೊಂಡಿದ್ದರಂತೆ. ಇದನ್ನು ಅವರೇ ನನಗೆ ನಂತರ ತಿಳಿಸಿದರು. ಅದಕ್ಕೆ ಸ್ವಾಮಿ ಬ್ರಹ್ಮಾನಂದರು, 'ನನಗೂ ಇಚ್ಛೆ ಇದೆ! ನಾನು ಸದಾ ಸಿದ್ಧ. ಅವನಿಗೆ ಸ್ವಾಮಿಜಿಯಿಂದ ಏನೋ ದೊರೆತಿದೆ, ಆದ್ದರಿಂದ ನಾನು ಹೇಗೆ ಅವನಿಗೆ ದೀಕ್ಷೆ ಕೊಡಲು ಸಾಧ್ಯ?" ಎಂದು ಹೇಳಿದರಂತೆ.

ಅವರು ಮದರಾಸಿನಲ್ಲಿದ್ದಾಗ ಕೆಲವು ಬ್ರಹ್ಮಚಾರಿಗಳಿಗೆ ಸನ್ಯಾಸ ನೀಡಿದರು ಮತ್ತು ಆ ದಿನದಂದು ನನ್ನನ್ನೂ ಕೂಡ ಸನ್ಯಾಸ ತೆಗೆದುಕೊಳ್ಳುವೆಯಾ ಎಂದು ಕೇಳಿದರು. ನನಗೆ ಆಶ್ಚರ್ಯವಾಯಿತು. ಏಕೆಂದರೆ ನಾನು ಬ್ರಹ್ಮಚಾರಿಯಾಗಿ ಸೇರಿ ಒಂದೂವರೆ ವರ್ಷ ಮಾತ್ರ ಆಗಿತ್ತು. "ಬೇಡಿ, ಸ್ವಾಮಿಜಿ; ನಾನು ಬ್ರಹ್ಮಚರ್ಯವನ್ನು ತೆಗೆದುಕೊಳ್ಳುತ್ತೇನೆ" ಎಂದು ನಾನು ಹೇಳಿದೆ. ಅವರು ಏನೋ ತಪ್ಪು ಮಾಡುತ್ತಿರಬಹುದೆಂದು ನನಗೆ ಅನ್ನಿಸಿತು. ಅವರು ನನಗೆ ಸನ್ಯಾಸವನ್ನು ಕೊಡಬೇಕೆಂದಿದ್ದರೆಂದೂ ನಾನು ಸಮ್ಮತಿಸಬೇಕಾಗಿತ್ತೆಂದೂ ಅವರ ಸೇವಕರಾದ ಸ್ವಾಮಿ ನಿರ್ವೇದಾನಂದರಿಂದ ಅನಂತರ ತಿಳಿಯಿತು. ಆಗ ನನಗೇನೂ ಬೇಸರವೂ ಆಗಲಿಲ್ಲ. ಏಕೆಂದರೆ ಅವರು ಅಷ್ಟು ಬೇಗ ಕಾಲವಾಗುವರೆಂದು ಯಾರೂ ಎಣಿಸಿರಲಿಲ್ಲ. ಬೇಲೂರಿನಲ್ಲಿ ಸ್ವಲ್ಪ ಕಾಲವಿದ್ದು ನಂತರ ಭುವನೇಶ್ವರದಲ್ಲಿ ಸ್ವಲ್ಪ ಕಾಲ ಇರುವುದಾಗಿಯೂ ಅಲ್ಲಿ ತಮ್ಮೊಡನೆ ಇರಲು ನನಗೆ ಹೇಳಿ ಕಳುಹಿಸುವುದಾಗಿಯೂ ಮದರಾಸನ್ನು ಬಿಡುವ ಮುನ್ನ ಎರಡು ಬಾರಿ ನನಗೆ ಹೇಳಿ

ದ್ದರು. ಅದಾದ ಒಂದು ವರ್ಷದೊಳಗೆ, ಅಂದರೆ ೧೯೨೨ರ ಏಪ್ರಿಲ್‌ನಲ್ಲಿ ಅವರು ಕೊಲ್ಕತಾದಲ್ಲಿ ದೇಹವನ್ನು ತ್ಯಜಿಸಿದರು.

ಆಗ ನಾನು ನಿಜವಾಗಿಯೂ ದಿಕ್ಕು ಕಾಣದಾದೆ. ಸ್ವಾಮಿಜಿ ಯಿಂದ ಮಂತ್ರೋಪದೇಶ ಪಡೆದಿರುವೆನೆಂದು ಅನೇಕ ಬಾರಿ ಭರವಸೆ ಪಡೆದಿದ್ದೆನಾದರೂ, ನನ್ನ ಮನಸ್ಸಿನಲ್ಲಿ ಇನ್ನೂ ಸಂದೇಹ ಇತ್ತು. ಆದುದರಿಂದ ಸ್ವಾಮಿ ಶಿವಾನಂದರೇ ನನ್ನ ಕೊನೆಯ ಭರವಸೆ ಎಂದು ಭಾವಿಸಿದೆ. ಆಗ ಅವರು ಸಂಘದ ಅಧ್ಯಕ್ಷರಾಗಿದ್ದರು. ಸಂಘದ ಅಧ್ಯಕ್ಷರಾಗಿರುವ ಸ್ವಾಮಿಗಳು ಶ್ರೀರಾಮಕೃಷ್ಣರ ಸ್ಥಾನದಲ್ಲಿರುವರೆಂದೇ ನಾವು ಪರಿಗಣಿಸು ತ್ತೇವೆ. ನಾನು ಅವರಿಗೆ ಪತ್ರ ಬರೆದೆ. ಬಹಳ ಕಾಲ ಉತ್ತರ ಬರಲಿಲ್ಲ. ನಾನು ತುಂಬಾ ಹತಾಶನಾದೆ. ಅವರ ಮೌನಕ್ಕೆ ಅರ್ಥ ಕಲ್ಪಿಸಿ ನನಗಾಗಿದ್ದ ಅನುಭವ ನಿಜವಾದುದಲ್ಲವೆಂದು ಅವರು ಭಾವಿಸಿರಬೇಕು ಎಂದುಕೊಂಡೆ. ಅಷ್ಟರಲ್ಲಿ ಅವರ ಪತ್ರ ಬಂದಿತು. ಅದು ದುರ್ಗಾಪೂಜೆಯ ಮೊದಲ ದಿನ. ಅಂದು ಬೆಳಗ್ಗೆ ನಾನು ಪ್ರಾರ್ಥನಾಮಂದಿರದಲ್ಲಿ ಇದ್ದಾಗ ಇದ್ದಕ್ಕಿದ್ದಂತೆ, ಅವರಿಂದ ಇಂದು ಪತ್ರ ಬಂದೇ ಬರುವು ದೆಂದು ನಾನು ಭಾವಿಸಿದುದು ನನಗೆ ನೆನಪಿದೆ. ನಾನು ಕೆಳಗಡೆ ಮಠದ ಆಫೀಸಿಗೆ ಹೋದಾಗ ಅಲ್ಲಿ ಅವರ ಉತ್ತರ ನನಗಾಗಿ ಕಾಯುತ್ತಿರುವುದು ಕಂಡುಬಂದಿತು. ಅದರ ಅನುವಾದ ಹೀಗಿದೆ:

**ಬೇಲೂರು ಮಠ**
**ಹೌರಾ, ಬಂಗಾಳ**
**ಸೆಪ್ಟೆಂಬರ್ ೨೩, ೧೯೨೨**

ಪ್ರಿಯ **ಜೋಗೇಶ್,**

ಎರಡು ವಾರಗಳ ಕಾಲ ನಾನು ಮಠದಲ್ಲಿ ಇರಲಿಲ್ಲ ವಾದ್ದರಿಂದ ನಿನ್ನ ಪತ್ರಕ್ಕೆ ಉತ್ತರ ಬರೆಯುವುದು ತಡ ವಾಯಿತು. ನಿನ್ನ ಪತ್ರವನ್ನು ನಾನು ಬಹಳ ಗಮನವಿಟ್ಟು ಓದಿರುವೆ. ನೀನು ಮತ್ತಾವ ದೀಕ್ಷೆಯನ್ನೂ ತೆಗೆದುಕೊಳ್ಳ ಬೇಕಾದ ಆವಶ್ಯಕತೆ ಇಲ್ಲವೆಂದು ನನಗೆ ಅನ್ನಿಸುವುದು. ಸ್ವಾಮಿಜಿಯಂತಹ ದೈವಾಂಶಪುರುಷರು ಮತ್ತು ಭಗ ವಂತನ ಅವತಾರಕ್ಕೆ ಸಮನಾದವರು ಯಾವಾಗ ಕನಸಿನಲ್ಲಿ ಅನುಗ್ರಹ ಮಾಡಿರುವರೋ ಅದೆಲ್ಲವನ್ನೂ ಸಂಪೂರ್ಣ ವಾಗಿ ಸತ್ಯವೆಂದೇ ಭಾವಿಸುವೆನು. ಬ್ರಹ್ಮಾನಂದರಿಂದ ಉಪದೇಶವನ್ನು ಪಡೆಯುವಂತೆ ಶರ್ವಾನಂದರು ನಿನಗೆ ಹೇಳಿದ್ದರು; ನೀನೂ ಪ್ರಯತ್ನಿಸಿದೆ; ಆದರೆ ಅದು ಹಾಗೆ ನಡೆಯಲಿಲ್ಲ. ನೀನು ಯಾರಿಂದಲೂ ಉಪದೇಶ ಪಡೆಯ ಬೇಕಾದ ಆವಶ್ಯಕತೆ ಇಲ್ಲವೆಂದು ಇದರಿಂದ ಅರ್ಥ ಮಾಡಿಕೊಳ್ಳಬೇಕು. ಆದ್ದರಿಂದ ಯಾವ ಆತಂಕವೂ ಇಲ್ಲದೆ ಎಂದಿನಂತೆ ಮುಂದೆ ಸಾಗು. ಶ್ರೀರಾಮಕೃಷ್ಣರ ಇಚ್ಛೆ ಯಂತೆಯೇ ಸ್ವಾಮಿಜಿ ನಿನ್ನನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಿರುವರು ಮತ್ತು ಮುಂದೆಯೂ ನಡೆಸುವರು ಎಂಬುದನ್ನು ಮನದಟ್ಟು ಮಾಡಿಕೋ. ನನ್ನ ಹೃತ್ಪೂರ್ವಕ ಪ್ರೀತಿ ಮತ್ತು ಆಶೀರ್ವಾದ ನಿನ್ನ ಮೇಲಿದೆ ಎಂಬುದನ್ನು ತಿಳಿ. ಈಗ ಜಗನ್ಮಾತೆಯ ಉತ್ಸವ ನಡೆಯುತ್ತಿರುವುದರಿಂದ ಎಲ್ಲರೂ ಬಿಡುವಿಲ್ಲದೆ ಕಾರ್ಯೋನ್ಮುಖರಾಗಿರುವರು. ಆಹಾ, ಕಳೆದ ವರ್ಷ ಸುಮಾರು ಇದೇ ಸಮಯದಲ್ಲಿ ನಾವು ನಿಮ್ಮೆಲ್ಲರೊಡನೆ ಬೆಂಗಳೂರು ಮತ್ತು ಮದ ರಾಸಿನಲ್ಲಿ ಬ್ರಹ್ಮಾನಂದರ ಸಂಗದಲ್ಲಿ ಮಹದಾನಂದದಿಂದ ಕಾಲ ಕಳೆದೆವು. ನೀವೆಲ್ಲರೂ—ರಾಮು, ರಾಮಾನುಜ, ರಂಗಸ್ವಾಮಿ ಮತ್ತು ಇತರ ಭಕ್ತರು—ದಯವಿಟ್ಟು ನನ್ನ ವಿಶ್ವಾಸವನ್ನು ಸ್ವೀಕರಿಸಿ.

**—ಶಿವಾನಂದ**

ಈ ಪತ್ರ ನನ್ನನ್ನು ಮಂತ್ರಮುಗ್ಧನನ್ನಾಗಿ ಮಾಡಿತು. ನನ್ನ ಎಲ್ಲ ಚಿಂತೆಗಳು ಮತ್ತು ಆತಂಕಗಳು ಮನಸ್ಸಿನಿಂದ ಒಂದೇ ಏಟಿಗೆ ಅಳಿಸಿಹೋದುವು. ಅವರು ಬರೆದಿರುವುದು ಸತ್ಯ ವೆಂದೂ, ಕೊನೆಯ ನಿರ್ಧಾರಕ ವಾಕ್ಯವೆಂದೂ, ನಾನಿನ್ನು ಸಂದೇಹ ಪಡಬೇಕಾಗಿಲ್ಲ ಎಂದೂ ನನಗೆ ತಿಳಿಯಿತು. ಬಹಳ ಕಾಲದ ನಂತರ ಈ ಆಶೀರ್ವಾದವನ್ನು ಮತ್ತೆ ಸ್ವಾಮಿ ಶಿವಾ ನಂದರು ಪುಷ್ಟಿಗೊಳಿಸಿದರು. ನಾನು ಅಮೆರಿಕಕ್ಕೆ ಪ್ರಯಾಣ ಮಾಡುವ ಹಿಂದಿನ ಸಂಜೆ ಅವರು ಬೇಲೂರಿನಲ್ಲಿ ತಮ್ಮ ಕೊಠಡಿಗೆ ಬರುವಂತೆ ನನಗೆ ಹೇಳಿ ಕಳುಹಿಸಿದರು. ಅದು ನಡೆದುದು ಮೇ ೧೯೩೦ರಲ್ಲಿ. ಆ ವೇಳೆಗೆ ಅವರ ಶರೀರ ದುರ್ಬಲವಾಗಿತ್ತಲ್ಲದೆ ಅನೇಕ ವೇಳೆ ಹಾಸಿಗೆಯ ಮೇಲೆಯೇ ಇರಬೇಕಾಗುತ್ತಿತ್ತು. ನಾನು ಅವರ ಕೋಣೆಗೆ ಹೋದಾಗ ಅವರು ನನ್ನ ಕಡೆ ನೋಡಿ ಹೇಳಿದರು, "ನೀನು ಸ್ವಾಮಿಜಿ ಯವರ ಶಿಷ್ಯ, ಅಲ್ಲವೇ?"

ನಾನು ಹೇಳಿದೆ, "ಹೌದು, ಮಹಾರಾಜ್"

ಅವರು ಅಷ್ಟೇ ಹೇಳಿದ್ದು. ಅವರು ನನಗೆ ಹೇಳಿದ ಕೊನೆಯ ಮಾತುಗಳವು. ಆ ಮಾತುಗಳನ್ನು ನಾನು ಎಂದಿಗೂ ಮರೆಯಲಾರೆ. ನಾನು ೧೯೩೪ರ ಕೊನೆಯಲ್ಲಿ ಭೇಟಿಗಾಗಿ ಭಾರತಕ್ಕೆ ಹಿಂತಿರುಗುವ ವೇಳೆಗೆ ಅವರಾಗಲೇ ದೇಹ ಬಿಟ್ಟಿದ್ದ ರಿಂದ ನಾನು ಅವರನ್ನು ಮತ್ತೆ ನೋಡಲೇ ಇಲ್ಲ. ನಾನು ಯಾರ ಶಿಷ್ಯನೆಂಬ ಬಗ್ಗೆ ನೆನಪಿಸಿಕೊಟ್ಟ ಅವರ ಕೊನೆಯ ಮಾತುಗಳು ಸದಾ ನನ್ನೊಂದಿಗೇ ಇರುವುವು. ನಾನು ಸ್ವಲ್ಪ ವಿವರವಾಗಿಯೇ ತಿಳಿಸಿರುವಂತೆ ನನಗಾಗಿದ್ದ ಅನುಭವವನ್ನು ಸತ್ಯವೆಂದು ದೃಢೀಕರಿಸಿದ ಹಿರಿಯ ಸ್ವಾಮಿಗಳಲ್ಲಿ ಇತರರು



ಮದ್ರಾಸ್ ಮಠ, ೧೯೨೩. ಮೊದಲ ಸಾಲು, ಎಡದಿಂದ ಮೂರನೆಯವರು, ಸ್ವಾಮಿ ಶರ್ವಾನಂದಜೀ, ಪೂಜ್ಯ ಶಿವಾನಂದಜೀ, ಪೂಜ್ಯ ಬ್ರಹ್ಮಾನಂದಜೀ, ಸ್ವಾಮಿ ಸದಾನಂದಜೀ, ಸ್ವಾಮಿ ಅನಂತಾನಂದಜೀ. ಮಧ್ಯದ ಸಾಲಿನಲ್ಲಿ, ವೃತ್ತದಿಂದ ಗುರುತಿಸಲಾದವರು ಬ್ರಹ್ಮಚಾರಿ ಯೋಗೇಶ್( ಸ್ವಾಮಿ ಅಶೋಕಾನಂದ), ಅವರ ಬಲ ಪಕ್ಕದಲ್ಲಿ ಬ್ರಹ್ಮಚಾರಿ ಅಬನಿ (ಸ್ವಾಮಿ ಪ್ರಭವಾನಂದ)

ಇದ್ದರೂ ನನ್ನ ಮನಸ್ಸಿನ ಎಲ್ಲ ಸಂದೇಹಗಳನ್ನೂ ತೆಗೆದು ಹಾಕಿದವರು ಸ್ವಾಮಿ ಶಿವಾನಂದರೊಬ್ಬರೇ. ಅದರ ಮೇಲೆ ನಿಶ್ಚಿತವಾದ ಅಂತಿಮ ಮುದ್ರೆಯನ್ನೊತ್ತಿದವರು ಅವರೇ.

ನಾನು ಅವರಿಂದ ಪಡೆದ ಒಂದು ದೊಡ್ಡ ಆಶೀರ್ವಾದ ಇದು. ಅದಕ್ಕಾಗಿ ನಾನು ಅವರಿಗೆ ಎಂದೆಂದಿಗೂ ಕೃತಜ್ಞ ನಾಗಿರುವೆನು. ಇದಲ್ಲದೆ, ಇನ್ನೂ ಅನೇಕ ರೀತಿಗಳಲ್ಲಿ ಆಶೀರ್ವಾದ ಪಡೆದಿರುವೆ. ಅವುಗಳ ವಿಷಯವಾಗಿ ಸ್ವಲ್ಪ ನಿಮಗೆ ಹೇಳುವೆನು.

ನಾನು ೧೯೨೫ರಲ್ಲಿ ಸ್ವಾಮಿ ಶಿವಾನಂದರಿಂದ ಸನ್ಯಾಸ ವನ್ನು ಪಡೆದರೂ ಅವರೊಂದಿಗೆ ನನ್ನ ನಿಕಟ ಸಂಬಂಧ ಪ್ರಾರಂಭವಾದುದು ನಾನು ಮದರಾಸನ್ನು ಬಿಟ್ಟ ನಂತರ. ನನ್ನನ್ನು ಮದರಾಸಿಗೆ ಕಳುಹಿಸಿದಾಗ ಸ್ವಾಮಿ ಬ್ರಹ್ಮಾನಂದರು "ನೀನು ಐದು ವರ್ಷ ಅಲ್ಲಿದ್ದರೆ ನಿನ್ನ ತರಬೇತಿ ಮುಗಿಯು ವುದು" ಎಂದಿದ್ದರು. ನಾನು ಸರಿಯಾಗಿ ಐದು ವರ್ಷಗಳ ಕಾಲ ಅಲ್ಲಿದ್ದೆ. ಮೇ ೧೯೨೧ರಲ್ಲಿ ಅಲ್ಲಿಗೆ ಹೋದೆ, ಮೇ ೧೯೨೬ರಲ್ಲಿ ಅಲ್ಲಿಂದ ಹೊರಡಬೇಕಾಯಿತು. ಸ್ವಾಮಿ ಬ್ರಹ್ಮಾ ನಂದರು ಹೇಳಿದ್ದಂತೆಯೇ ನನ್ನ ತರಬೇತಿ ಮುಗಿದಿತ್ತು. ಅಲ್ಲಿಂದ ಹಿಮಾಲಯದ ಆಶ್ರಮಕ್ಕೆ—ಮಾಯಾವತಿಯಲ್ಲಿರುವ ಅದ್ವೈತ ಆಶ್ರಮಕ್ಕೆ—ನನ್ನನ್ನು ಕಳುಹಿಸಿದರು ಮತ್ತು ಬಹು ಬೇಗನೆ ರಾಮಕೃಷ್ಣ ಮಹಾಸಂಘದ ಮಾಸಪತ್ರಿಕೆಯಾದ 'ಪ್ರಬುದ್ಧ ಭಾರತ'ದ ಸಂಪಾದಕನಾದೆ. ಅದೊಂದು ಬೃಹತ್ ಜವಾಬ್ದಾರಿಯ ಕೆಲಸವಾಗಿತ್ತಾದರೂ ಅದನ್ನು ನಿಭಾಯಿಸಲು ಬೇಕಾದ ತಿಳಿವಳಿಕೆ ಮತ್ತು ಪರಿಣತಿಯನ್ನು ಮದರಾಸಿನಲ್ಲಿ ಹೇಗೋ ಗಳಿಸಿದ್ದೆ. ಅದಕ್ಕಾಗಿಯೇ ನಾನು ಸಿದ್ಧನಾದಂತಿತ್ತು.

ಅಕ್ಟೋಬರ್ ೧೯೨೬ರಲ್ಲಿ ಮಾಯಾವತಿಗೆ ಹೋಗುವ ಮೊದಲು ನಮ್ಮ ಸಂಪ್ರದಾಯದಂತೆ ಸ್ವಾಮಿ ಶಿವಾನಂದರನ್ನು ಕಾಣಲು ನಾನು ಬೇಲೂರಿಗೆ ಹೋದೆ. ಅವರಿಗೆ ನಮಸ್ಕರಿಸಿ ಅವರ ಆಶೀರ್ವಾದವನ್ನು ಬೇಡಿದೆ. ಆದರೆ ನಾನು ಒಂದು ತಪ್ಪು ಮಾಡಿದೆ. ಅವರೊಂದಿಗೆ ಆಗ ನಾನು ಮನಬಿಚ್ಚಿ ಸಾಕಷ್ಟು ಸ್ಪಷ್ಟವಾಗಿ ಮಾತನಾಡಲಿಲ್ಲ. ನನ್ನ ಮನಸ್ಸು ದುಃಖದ ಆಲೋಚನೆಗಳಿಂದ ಭಾರವಾಗಿದ್ದು ಅವುಗಳನ್ನು ಹೊರಹಾಕ ಬೇಕೆಂದಿದ್ದರೂ ಹಾಗೆ ಮಾಡಲು ನನ್ನಿಂದ ಸಾಧ್ಯವಾಗಲಿಲ್ಲ. ಅದರ ಬಗ್ಗೆ ನಾನು ಅವರಿಗೆ ಏನೂ ಹೇಳದಿದ್ದ ಕಾರಣ ನಾನು ಮಾಯಾವತಿಗೆ ಹೋದಾಗಲೂ ಅಂಥ ಆಲೋಚನೆ ಗಳು ಏಳುತ್ತಲೇ ಇದ್ದುವು. ಆ ಮನಸ್ಥಿತಿಯಿಂದ ಮತ್ತು ಅದರ ಪರಿಣಾಮದಿಂದ ನಾನು ತಲ್ಲಣಗೊಂಡಿದ್ದೆ. ಕೊನೆಗೆ, ೧೯೨೮ರ ಕೊನೆಯಲ್ಲಿ ನನ್ನನ್ನು ಪೀಡಿಸುತ್ತಿದ್ದ ವಿಚಾರವನ್ನು ತಿಳಿಸಿ ಅವರನ್ನು ಕಾಣಲು ಅನುಮತಿಯನ್ನು ಕೋರಿ ಅವರಿಗೆ ದೀರ್ಘವಾದ ಪತ್ರವೊಂದನ್ನು ಬರೆದೆ. ಅದೇ ಪತ್ರ ದಲ್ಲಿ, ಅಂತಹ, ಮನಸ್ಸನ್ನು ಕದಡುವ ದುಃಖಮಯ ಆಲೋಚನೆ ಗಳನ್ನು ಅಷ್ಟು ದೀರ್ಘ ಕಾಲ ಮನಸ್ಸಿನಲ್ಲಿ ಇರಲು ಬಿಟ್ಟುದಕ್ಕಾಗಿ ನಾನು ಅವರ ಕ್ಷಮಾಪಣೆಯನ್ನು ಕೇಳಿದೆ. ಅವರು ಕೂಡಲೇ ಒಂದು ಸೊಗಸಾದ ಮತ್ತು ಕ್ಷಮಾಶೀಲ ವಾದ ಉತ್ತರವನ್ನು ನನಗೆ ಬರೆದರು. ಅದನ್ನು ಓದಿದ ಕೂಡಲೇ ನನ್ನ ಮನಸ್ಸಿನ ಭಾರ ಹೊರಟುಹೋಯಿತು. ಇಲ್ಲಿಯೂ ನೀವು ಗಮನಿಸಬೇಕಾದ್ದು ಅವರ ಮಾತುಗಳ— ಬರೆದ ಮಾತುಗಳದ್ದೂ—ಅಗಾಧ ಪರಿಣಾಮವನ್ನು. ಆ ಕ್ಷೋಭೆಯುಂಟುಮಾಡುವ ಆಲೋಚನೆಗಳು ಮತ್ತೆ ನನ್ನನ್ನು ಕಾಡಲೇ ಇಲ್ಲ. ನಂತರ ಅವು ಕೆಲವು ವೇಳೆ ತಲೆದೋರು ತ್ತಿದ್ದರೂ ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ. ಅವರ ಪತ್ರ ಅವುಗಳನ್ನು ಸಂಪೂರ್ಣವಾಗಿ ದೂರಮಾಡಿತ್ತು.

ಸ್ವಲ್ಪ ಕಾಲದ ನಂತರ ೧೯೨೮ರ ಕ್ರಿಸ್‌ಮಸ್ ಸಮಯದಲ್ಲಿ ಅವರಿಗೆ ಬಹಳ ಕಾಯಿಲೆಯಾಗಿದ್ದಾಗ ಸುಧಾರಿಸಿಕೊಳ್ಳಲು ಕಾಶಿಗೆ ಬಂದಿರುವುದಾಗಿ ತಿಳಿದು ಅವರನ್ನು ನೋಡಲು ಹೋದೆ. ಆ ಸಮಯದಲ್ಲಿ ಅವರೊಂದಿಗೆ ಪ್ರತ್ಯೇಕವಾಗಿ ಮಾತ ನಾಡಲಿಲ್ಲವಾದರೂ, ಅವರನ್ನು ಆಗಾಗ ನೋಡುತ್ತಿದ್ದೆ. ಪ್ರತಿ ನಿತ್ಯ ಬೆಳಗ್ಗೆ ಅವರಿಗೆ ನಮಸ್ಕರಿಸುವುದು ಮಠದ ಸನ್ಯಾಸಿಗಳ ಪದ್ಧತಿ. ಹಾಗೆ ಹೋದಾಗ ಅವರ ಸಾನ್ನಿಧ್ಯದಲ್ಲಿ ನಾವು ಸ್ವಲ್ಪ

ಹೊತ್ತು ಕುಳಿತುಕೊಳ್ಳುತ್ತಿದ್ದೆವು. ಮತ್ತು ಅವರು, ನಮ್ಮ ಆರೋಗ್ಯ ಮುಂತಾದುವುಗಳ ಬಗ್ಗೆ ವಿಚಾರಿಸುತ್ತಿದ್ದರು. ನಾವು ಪ್ರಶ್ನೆ ಕೇಳಿದರೆ ಅವರು ಉತ್ತರ ಕೊಡುತ್ತಿದ್ದರು. ಅನೇಕ ವಿಷಯ ಗಳು ಪ್ರಸ್ತಾಪಕ್ಕೆ ಬರುತ್ತಿದ್ದವು. ಅವರು ನೀಡುವ ಉತ್ತರಗಳು ನಮಗೆ ಬಹಳ ಉಪಯುಕ್ತವಾಗಿರುತ್ತಿದ್ದವು. ಕಾಶಿಯಲ್ಲಿ ಒಂದು ತಿಂಗಳು ಇದ್ದು ನಂತರ ಕೊಲ್ಕತಾಕ್ಕೆ ಹೋದೆ. ಫೆಬ್ರವರಿಯಲ್ಲಿ ಸ್ವಾಮಿಗಳು ಬೇಲೂರಿಗೆ ಹಿಂತಿರುಗಿದರು. ಈ ಬಾರಿಯೂ ಅವರು ಎಂದಿನಂತೆಯೇ ನನ್ನ ಮೇಲೆ ಬಹಳ ಕೃಪೆದೋರಿದರು. ವಾಸ್ತವವಾಗಿ, ಆ ಸಮಯದಿಂದಲೇ ನಾನು ಅವರನ್ನು ನಿಕಟವಾಗಿ ಅರಿತದ್ದು. ಅವರ ಅಪಾರ ಕರುಣಾ ಸ್ರೋತ ನನ್ನೆಡೆಗೆ ಯಾವಾಗಲೂ ಹರಿಯುತ್ತಿತ್ತು.

ಅವರ ಜೀವನದ ಕಡೆಯ ವರ್ಷಗಳಲ್ಲಿ ಅವರ ಶರೀರ ದುರ್ಬಲವಾಗಿದ್ದರೂ, ಅವರ ಮನಸ್ಸು ಬಹಳ ಉನ್ನತವಾದ ಸ್ಥಿತಿಯಲ್ಲಿರುತ್ತಿತ್ತು. ಒಂದು ದಿನ ಬೆಳಗ್ಗೆ ನಾನು ಕೊಲ್ಕತಾ ದಿಂದ ಬೇಲೂರಿಗೆ ಹೋದಾಗ ಅವರು ಮಠದ ಅಂಗಳದಲ್ಲಿ ಓಡಾಡುತ್ತಿದ್ದರು. ನಾನು ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದೆ. "ಇಲ್ಲ, ಚೆನ್ನಾಗಿಲ್ಲ. ಆದರೆ ನಾನು ನಿನಗೆ ಒಂದು ವಿಷಯ ಹೇಳುವೆ. ನಾನು ಈ ಹಿಂದೆ ಯಾವ ಆಧ್ಯಾತ್ಮಿಕ ಅನುಭವಗಳನ್ನು ಪಡೆಯಲು ಬಹಳ ಶ್ರಮ ಪಡಬೇಕಿತ್ತೋ ಅವು ಈಗ ತಮ್ಮಷ್ಟಕ್ಕೆ ತಾವೇ ಸಹಜವಾಗಿ ಬರುತ್ತಿವೆ." ಈ ಮಾತುಗಳನ್ನು ದೃಢವಾಗಿಯೂ ಹರ್ಷಚಿತ್ತರಾಗಿಯೂ ಹೇಳಿದರು. ಆ ದಿನ ಗಳಲ್ಲಿ ಅವರು ಅಧಿಕ ರಕ್ತದ ಒತ್ತಡದಿಂದ ಕಷ್ಟಪಡುತ್ತಿದ್ದರು. ಅವರು ಮಹಡಿಯಿಂದ ಇಳಿದು ಬರಬಾರದೆಂದು ಕೆಲವೇ ದಿವಸಗಳಲ್ಲಿ ವೈದ್ಯರು ವಿಧಿಸಿದರು. ಆದ್ದರಿಂದ, ಅನಂತರ ಅವರು ಬಹುಮಟ್ಟಿಗೆ ಎರಡನೆಯ ಮಹಡಿಯಲ್ಲೇ ಇರುತ್ತಿದ್ದರು. ಅವರನ್ನು ನೋಡಬೇಕಾದರೆ ಮೇಲಿನ ಮಹಡಿಗೇ ಹೋಗ ಬೇಕಿತ್ತು.

ಪ್ರತಿವರ್ಷವೂ ನಾನು ಅದ್ವೈತಾಶ್ರಮದ ಕೊಲ್ಕತಾ ಶಾಖೆ ಯಲ್ಲಿ ಸ್ವಲ್ಪ ಕಾಲ ಕಳೆಯುತ್ತಿದ್ದೆ. ಅಲ್ಲಿ 'ಪ್ರಬುದ್ಧ ಭಾರತ'ದ ಸಂಪಾದಕತ್ವ ಮತ್ತು ಪ್ರಕಾಶನದ ಕೆಲಸ ಆಗುತ್ತಿರುತ್ತದೆ. ಅಲ್ಲಿಂದ ಬೇಲೂರು ಮಠಕ್ಕೆ ಆಗಾಗ ಹೋಗುತ್ತಿದ್ದೆ. ಮಧ್ಯಾಹ್ನದ ಹೊತ್ತು ಮುಂಚಿತವಾಗಿಯೇ ಹೋಗಲು ಪ್ರಯತ್ನಿಸುತ್ತಿದ್ದೆ, ಏಕೆಂದರೆ ಆ ಸಮಯದಲ್ಲಿ ಬಿಸಿಲಿನ ತಾಪ ಜೋರಾಗಿರುತ್ತಿದ್ದುದರಿಂದ ಹೆಚ್ಚು ಜನ ಬರುತ್ತಿರಲಿಲ್ಲ. ಸ್ವಾಮಿ ಶಿವಾನಂದರೊಡನೆ ಏಕಾಂತದಲ್ಲಿ ಮಾತನಾಡುವುದು ಆಗ ಸುಲಭವಾಗುತ್ತಿತ್ತು. ಅವರು ಮಧ್ಯಾಹ್ನದ ವಿಶ್ರಾಂತಿಯನ್ನು ಪಡೆದು ಒಂದು ಆರಾಮಕುರ್ಚಿಯಲ್ಲಿ ಕುಳಿತಿರುತ್ತಿದ್ದರು. ಅವರ ಆರೋಗ್ಯ ಚೆನ್ನಾಗಿರಲಿಲ್ಲವಾದ್ದರಿಂದ ಯಾರೂ ಅವರೊಡನೆ ಹೆಚ್ಚು ಮಾತನಾಡುತ್ತಿರಲಿಲ್ಲ ಎಂಬುದೂ ನಿಜ. ಕೇವಲ ಅವರನ್ನು ನೋಡುವುದು ಮತ್ತು ಅವರ ಹತ್ತಿರ ಕುಳಿತುಕೊಳ್ಳುವುದೇ ನಮಗೊಂದು ಸಂತೋಷ; ಅದೇ ನಮಗೆ ತೃಪ್ತಿ ನೀಡುತ್ತಿತ್ತು. ಆದರೂ, ಕೆಲವು ವೇಳೆ, ಹಲ ವಾರು ವಿಷಯಗಳ ಬಗ್ಗೆ ಮಾತುಕತೆ ನಡೆಯುತ್ತಿತ್ತು.

ಒಮ್ಮೆ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಎದ್ದಿತು. ಸಂಘದ ವಹಿವಾಟುಗಳನ್ನು ನಿರ್ವಹಿಸುವ ಒಂದು ಟ್ರಸ್ಟಿಗಳ ಮಂಡಲಿ ಇದೆ. ನಾನು ಯೋಚಿಸಿದೆ, "ಟ್ರಸ್ಟಿಗಳು ನನಗೆ ವಿದೇಶದಲ್ಲಿ ಕೆಲಸ ಮಾಡಲು ಹೋಗುವಂತೆ ಹೇಳಿದರೆ, ನಾನು ಹೋಗ ಬೇಕೆ ಅಥವಾ ಬೇಡವೇ?" ಭಾರತದ ಹೊರಗಡೆ ಕೆಲಸ ಮಾಡುವುದೆಂದರೆ ಅದೊಂದು ದೊಡ್ಡ ಜವಾಬ್ದಾರಿ. ಮೊದಲನೆಯದಾಗಿ, ಅರ್ಹತೆಯ ಪ್ರಶ್ನೆಯಿದೆ. ಅದರೊಂದಿಗೆ ವಿದೇಶದಲ್ಲಿ ಎದುರಿಸಬೇಕಾದ ಅನೇಕ ಕಷ್ಟಗಳನ್ನು ಸಹಿಸುವ ಶಕ್ತಿ ನನಗಿದೆಯೆ ಅಥವಾ ಇಲ್ಲವೆ ಎನ್ನುವುದು ನನಗೆ ತಿಳಿದಿರ ಲಿಲ್ಲ. ವಾಸ್ತವವಾಗಿ, ಆ ಸಮಯದಲ್ಲಿ ನನ್ನ ಪರಿಸ್ಥಿತಿಯ ಬಗ್ಗೆ ನನ್ನಲ್ಲಿ ಸಂಪೂರ್ಣ ನಕಾರಾತ್ಮಕ ಭಾವನೆಗಳೇ ಇದ್ದವು. ಆದುದರಿಂದ ನಾನು ಯೋಚಿಸಿದೆ, 'ಸ್ವಾಮಿ ಶಿವಾನಂದರನ್ನು ಕೇಳಲು ಇದೇ ಸಮಯ. ಅವರು ಹೆಚ್ಚು ಕಾಲ ಉಳಿಯ ಲಾರರು. ಅವರಿಂದ ಸ್ವಲ್ಪ ಮಾರ್ಗದರ್ಶನ ಮತ್ತು ಹಿತವಚನ ವನ್ನು ಪಡೆದರೆ ಅದರಂತೆ ಭವಿಷ್ಯದಲ್ಲಿ ನಾನು ನಡೆಯ ಬಹುದು.' ಇದು ಎಂತಹ ನಾಚಿಕೆಗೇಡಿನ ವಿಷಯ! ಆದರೆ ನನಗೆ ನಾನೇ ಹೇಳಿಕೊಂಡೆ, 'ಇಲ್ಲ, ಅವರ ಮಾರ್ಗದರ್ಶನ ಪಡೆಯದೇ ಉಳಿಯುವುದಕ್ಕಿಂತ ನಾಚಿಕೆಯಿಲ್ಲದೆ ಇರುವುದೇ ಉತ್ತಮ.'

ಒಂದು ದಿನ ಮಧ್ಯಾಹ್ನ ಈ ಸಮಸ್ಯೆಯ ಬಗ್ಗೆ ಅವರಿಗೆ ಹೇಳಿದೆ. ಅವರು, "ಖಂಡಿತ! ಖಂಡಿತ, ಅವರು ನಿನಗೆ ಹೋಗಲು ಹೇಳಿದರೆ ನೀನು ಹೋಗಬೇಕು" ಎಂದು ಹೇಳಿದರು.

ನಾನು ಹೇಳಿದೆ, "ಸ್ವಾಮಿಜಿ, ನನಗೆ ಯಾವುದೇ ಅರ್ಹತೆಯಿಲ್ಲ. ಅದಕ್ಕೆ ಬೇಕಾದ ಯಾವುದೇ ಸಾಮರ್ಥ್ಯವೂ ಇಲ್ಲ."

"ಓ, ನೀನು ಆ ಬಗ್ಗೆ ಯೋಚಿಸಬೇಕಾಗಿಲ್ಲ", ಎಂದು ಅವರು ಹೇಳಿದರು. ಅದು ಅತ್ಯಂತ ಅಪ್ರಸ್ತುತ ವಿಷಯವೆಂದು ಅವರು ಭಾವಿಸಿದಂತಿತ್ತು. "ಶ್ರೀರಾಮಕೃಷ್ಣರು ಅದನ್ನೆಲ್ಲಾ ನೋಡಿಕೊಳ್ಳುವರು; ನೀನು ಆ ಬಗ್ಗೆ ಚಿಂತಿಸಬೇಕಾಗಿಲ್ಲ. ಶ್ರೀರಾಮಕೃಷ್ಣರೇ ಎಲ್ಲವನ್ನೂ ಮಾಡುವರು."

ಸ್ವಾಮಿಗಳ ಜೀವಿತಕಾಲದಲ್ಲಿಯೇ ನನ್ನನ್ನು ಸ್ಯಾನ್ ಫ್ರಾನ್ಸಿಸ್ಕೋಗೆ ಕಳುಹಿಸಲಾಯಿತು. ಅವರು ಟ್ರಸ್ಟಿನ ಅಧ್ಯಕ್ಷ

ವಾಗಿದ್ದರು. ಮತ್ತು ಟ್ರಸ್ಟಿಗಳ ಸಭೆಯಲ್ಲಿ ನಾನು ಈ ದೇಶ (ಅಮೆರಿಕ)ಕ್ಕೆ ಬರುವ ವಿಚಾರಕ್ಕೆ ಅವರು ಸಂಪೂರ್ಣವಾಗಿ ಸಮ್ಮತಿಸಿದರು. ಅದು ಭರವಸೆಯನ್ನು ನೀಡುವ ವಿಚಾರವಾದರೂ ಅವರು ನನಗೆ ಮೊದಲೇ ಪ್ರತ್ಯೇಕವಾಗಿ ನೀಡಿದ್ದ ಉತ್ತೇಜನಕ್ಕಾಗಿ ನಾನು ಎಂದಿಗೂ ಅವರಿಗೆ ಕೃತಜ್ಞನಾಗಿರುವೆನು. ಅವರಿಂದಾಗಿಯೇ ನಾನು ಈ ದೇಶಕ್ಕೆ (ಅಮೆರಿಕಕ್ಕೆ) ಬರಲು ಯೋಗ್ಯನೆಂದು ಭಾವಿಸಿದೆ.


ಮತ್ತೊಂದು ಮಧ್ಯಾಹ್ನ ನಾನು ಅವರನ್ನು ಕೇಳಿದೆ, "ಸ್ವಾಮಿಜಿ, ನಾನು ಯಾವಾಗ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವೆ?" ಅವರು ಹೇಳಿದರು, 'ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವುದು ಬಹಳ ಕಷ್ಟವಾದ ವಿಚಾರ. ಅದಕ್ಕೆ ನೀನು ಬಹಳಷ್ಟು ಆಧ್ಯಾತ್ಮಿಕ ಸಾಧನೆಗಳನ್ನು ಮಾಡಬೇಕಾಗುವುದು." ಇಂತಹ ಮಾತುಗಳನ್ನು ಕೇಳಿದಮೇಲೆ ಅದರ ವಿಷಯವಾಗಿ ಮುಂದೆ ಯೋಚಿಸಲು ಧೈರ್ಯವಾಗುವುದಿಲ್ಲ. ನಾನು ಮತ್ತೇನೂ ಹೇಳಲಿಲ್ಲ. ಅಂದು ಮಧ್ಯಾಹ್ನ, ಸಾಮಾನ್ಯವಾಗಿ ನಾವೆಲ್ಲ ವಿರಾಮದ ಸಮಯದಲ್ಲಿ ಸೇರುವಂತೆ, ಇತರ ಸಾಧುಗಳೊಂದಿಗೆ ಮಾತನಾಡುತ್ತ ಓಡಾಡಿದೆ. ಬೇಲೂರು ಮಠದಲ್ಲಿ ಯಾವಾಗಲೂ ಅನೇಕ ಸಾಧುಗಳು ಇರುತ್ತಿದ್ದರು, ಅವರನ್ನು ಭೇಟಿ ಮಾಡುವುದು ಮತ್ತು ಅವರುಗಳೊಂದಿಗೆ ಮಾತನಾಡುವುದೇ ಒಂದು ಸಂತೋಷ. ಕೊಲ್ಕತಾದಿಂದ ಮಠಕ್ಕೆ ಒಂದು ದೋಣಿ ಸಂಚಾರದ ವ್ಯವಸ್ಥೆ ಇತ್ತು. ಸಂಜೆಯ ಹೊತ್ತಿಗೆ ಹಿಂದಿರುಗುವ ದೋಣಿಯನ್ನು ಹತ್ತುವ ಸಮಯ ಬಂದಿತು. ಸ್ವಾಮಿ ಶಿವಾನಂದರಿಗೆ ಪ್ರಣಾಮ ಮಾಡಿ ವಿದಾಯ ಹೇಳಲು ಹೋದೆ.

ಅವರು ನನಗಾಗಿ ಕಾತರದಿಂದ ಕಾಯುತ್ತಿರುವಂತೆ ಕಂಡಿತು. ಸ್ವಾಮಿಜಿಯ ಕೊಠಡಿಯ ಬಳಿ ವರಾಂಡದ ಮೂಲೆಯಲ್ಲಿದ್ದ ಕುರ್ಚಿಯಲ್ಲಿ ಅವರು ಕುಳಿತಿದ್ದರು. ನಾನು ಅವರಿಗೆ ನಮಸ್ಕರಿಸುತ್ತಿದ್ದಂತೆ ಅವರು ಉತ್ಸುಕತೆಯಿಂದ ಹೇಳಿದರು, 'ನೋಡು, ನಿನಗೆ ಹೇಳಬೇಕಾದುದೇನೋ ಇದೆ. ಸ್ವಾಮಿಜಿ ನಿನ್ನ ಬಗ್ಗೆ ಬಹಳ ಸಂತುಷ್ಟರಾಗಿದ್ದಾರೆ! ಅವರಿಗೆ ನಿನ್ನ ಮೇಲೆ ಬಹಳ ಪ್ರೀತಿಯಿದೆ." ಅವರು ಇಂತಹ ಅನೇಕ ವಿಷಯಗಳನ್ನು ಹೀಗೇ ಹೇಳುತ್ತಾ ಹೋದರು. "ನೀನು ಹೆಚ್ಚೇನೂ ಮಾಡಬೇಕಾಗಿಲ್ಲ. ಸ್ವಲ್ಪ ಪ್ರಯತ್ನ ಪಟ್ಟರೆ ಸಾಕು, ನೀನು ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವೆ!" ಎಂದೂ ಹೇಳಿದರು.

ಅವರು ಅದೆಷ್ಟು ಒಳ್ಳೆಯ ವಿಚಾರಗಳನ್ನು ಹೇಳಿದರು! ಆದರೆ ದೋಣಿ ಬರತೊಡಗಿತ್ತು, ನಾನು ಓಡಬೇಕಾಗಿತ್ತು. ಅದರ ಬಗ್ಗೆ ನನಗೆ ಬಹಳ ವಿಷಾದವಿದೆ. ನಾನು ಅವರನ್ನು ಕೇಳಬಹುದಿತ್ತು, 'ಮಹಾರಾಜ್, ಇವೆಲ್ಲಾ ನಿಮಗೆ ಹೇಗೆ ತಿಳಿಯಿತು? ಸ್ವಾಮಿಜಿಯವರೇ ನಿಮಗೆ ಏನಾದರೂ ಹೇಳಿದರೇ?" ನಾನದನ್ನು ಕೇಳಲಿಲ್ಲ. ಅಂದು ಸಂಜೆ ಅವರು ಅಷ್ಟು ಕಕ್ಕುಲತೆಯಿಂದ ಹೇಳಿದ್ದೆಲ್ಲವನ್ನೂ ನಾನು ಅವರಿಂದ ಪಡೆದ ಒಂದು ಮಹತ್ತಾದ ಆಶೀರ್ವಾದವೆಂದೇ ಭಾವಿಸಿದ್ದೇನೆ.✪

**(ಮುಂದುವರಿಯುವುದು)**

ಬೇಸಿಗೆಯ ಒಂದು ದಿನ ರಾತ್ರಿಯೂಟವಾದ ಮೇಲೆ ಶಶಿ ಮಹಾರಾಜ್ ಮಂಚದ ಮೇಲೆ ಮಲಗಿದ್ದರು; ನಾನು ಎಂದಿನಂತೆ ಅವರ ಕಾಲನ್ನೊತ್ತುತ್ತಿದ್ದೆ. ಆಗ ಸುಮಾರು ಹನ್ನೊಂದು ಗಂಟೆಯಾಗಿರಬಹುದು; ಸೆಖೆ ತಡೆಯಲಸಾಧ್ಯವಾಗಿತ್ತು. ಅವರು ಇದ್ದಕ್ಕಿದ್ದಂತೆ ಮೇಲಕ್ಕೆದ್ದರು; ಸೊಂಟಕ್ಕೊಂದು ಬಟ್ಟೆ ಕಟ್ಟಿಕೊಂಡು ದೇವರ ಮನೆಗೆ ಹೋದರು. ನನ್ನನ್ನೂ ಜೊತೆಗೆ ಬರುವಂತೆ ಹೇಳಿದರು. ರಾತ್ರಿ ಮಲಗುವುದಕ್ಕೆಂದು ಮಂಚದ ಮೇಲೆ ಇರಿಸಿದ್ದ ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಬೀಸಣಿಗೆಯಿಂದ ಗಾಳಿ ಹಾಕತೊಡಗಿದರು. ನನಗೆ ಸ್ವಾಮಿಜಿಯವರ ಭಾವಚಿತ್ರಕ್ಕೆ ಗಾಳಿ ಹಾಕುವಂತೆ ತಿಳಿಸಿದರು. ಸುಮಾರು ಒಂದು ಗಂಟೆ ಕಾಲ ಎಡೆಬಿಡದೆ ಗಾಳಿ ಹಾಕಿದ ಮೇಲೆ, ನಿಶ್ಶಬ್ದವಾಗಿ ದೇವರ ಮನೆಯಿಂದ ಹೊರಕ್ಕೆ ಹೊರಟುಹೋದರು. ಅವರ ಈ ನಡತೆ ನನ್ನ ಹೃದಯದಲ್ಲಿಯೂ ಶ್ರೀರಾಮ ಕೃಷ್ಣರು ನಿಜವಾಗಿಯೂ ಇಲ್ಲಿಯೇ ಇರುವರು, ಮಂಚದ ಮೇಲೆ ಮಲಗಿ ನಿದ್ರಿಸುತ್ತಿರುವರು, ನಾವು ಅವರಿಗೆ ಸೇವೆ ಮಾಡುತ್ತಿರುವೆವು ಎಂಬ ಭಾವನೆಯನ್ನುಂಟುಮಾಡಿತು.



ಕೊಠಡಿಯಿಂದ ಹೊರಕ್ಕೆ ಹೋದ ಅವರು, ಕಟ್ಟಡದ ಹೊರಗಡೆ ವರಾಂಡದಲ್ಲಿ ನಿಂತುಕೊಂಡಿದ್ದರು. ನಾನು ಒಳಗಿನಿಂದ ತಂದು ಹಾಕಿದ ಕುರ್ಚಿಯೊಂದರ ಮೇಲೆ ಕುಳಿತುಕೊಂಡರು. ನಾನು ಅವರಿಗೆ ಗಾಳಿ ಹಾಕತೊಡಗಿದೆ. ಶಶಿ ಮಹಾರಾಜ್ ಒಂದೂ ಮಾತನಾಡಲಿಲ್ಲ; ಅವರ ಮನಸ್ಸು ಅತೀತದೆಡೆಗೆ ಹಾರಿಹೋದಂತಿತ್ತು. ಇದ್ದಕ್ಕಿದ್ದಂತೆ ನನ್ನ ಕಡೆಗೆ ತಿರುಗಿ ಅವರು 'ನೋಡು, ನನ್ನ ಮನಸ್ಸು ಎತ್ತರ ಎತ್ತರಕ್ಕೆ ಏರಿ ಹೋಗುತ್ತಿದೆ. ನಾನು ತಕ್ಷಣ ಸಮಾಧಿಗೆ ಹೋಗಬಲ್ಲೆ', ಎಂದು ಹೇಳಿದರು. ನಾನು ಪರಿಸ್ಥಿತಿಯ ಗಂಭೀರತೆಯನ್ನು ಕಂಡು ಅಚ್ಚರಿಪಡುತ್ತ ಸುಮ್ಮನಿದ್ದೆ. ಅವರು ಅಲ್ಲಿಂದ ಎದ್ದು 'ಈಗ ಹೋಗಿ ಮಲಗಿಕೊಳ್ಳೋಣ' ಎಂದಾಗ ರಾತ್ರಿ ಸುಮಾರು ಎರಡು ಗಂಟೆಯಾಗಿರಬಹುದು. ಅಂತಹದೊಂದು ಸೂಕ್ಷ್ಮ ಸಂದರ್ಭಕ್ಕೆ ಸಾಕ್ಷಿಯಾಗಿದ್ದ ನನ್ನ ಪಾಲಿಗೆ ಅದೊಂದು ಮರೆಯಲಾಗದ ರಾತ್ರಿಯಾಗಿತ್ತು. *– ಸ್ವಾಮಿ ಶರ್ವಾನಂದರ ನೆನಪಿನಿಂದ*